**Government Of Karnataka**
**Department Of Collegiate Education**
**A.V.Kanthamma College for Women, Hassan -573201**

## Reservation policy order copy issued by Government of Karnataka

### Government of Karnataka reservation order translated from Kannada to English

Reservation of seats under Mysore university intake and other Universities within Karnataka quota is as per the government order issued from time to time except where there is only one seat reservation rule equitable distribution shall be followed. If all the categories of reservation cannot be covered the seats shall be allotted in the order of preference specified in table in that proportion making sure equitable distribution.

| Category | Reservation % |
|---|---|
| Scheduled Caste SC | 15 |
| Scheduled Tribe ST | 03 |
| Category-1 | 04 |
| Category-II | 15 |
| Category-II A | 04 |
| Category-III A | 04 |
| Category-III B | 05 |

Signature of Principal

Attested
Principal
A.V. Kanthamma College for Women
Hassan.

Reservation policy order copy issued by Govt of Karnataka

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಹಾಸನ ಜಿಲ್ಲೆ, ಹಾಸನ. ದಿನಾಂಕ:25-08-2010.

## ಸುತ್ತೋಲೆ

ವಿಷಯ:- ಭಾರತ ಸಂವಿಧಾನದ ಅನುಚ್ಛೇದ 15(4)ರಡಿ ಶೈಕ್ಷಣಿಕ ಸೌಲಭ್ಯ- ಹಿಂದುಳಿದ ವರ್ಗಗಳಿಗೆ ಶೈಕ್ಷಣಿಕ ಪ್ರವೇಶ- ಮೀಸಲಾತಿಯನ್ನು ಕಟ್ಟುನಿಟ್ಟಾಗಿ ಪಾಲಿಸುವ ಬಗ್ಗೆ.

ಉಲ್ಲೇಖ:-1. ಸರ್ಕಾರದ ಅಧಿಸೂಚನೆ ಸಂ/ಸಕಇ-247, ಎಸ್‌ಎಡಿ-90, ದಿ:22-02-1993.
2. ಸರ್ಕಾರದ ಆದೇಶ ಸಂ/ಸಕಇ-225/ಬಿಸಿಎ-2000, ದಿ:30-03-02.
3. ಸರ್ಕಾರದ ಅಧಿಸೂಚನೆ ಸಂಖ್ಯೆ/SWD-132/SAD-97/ದಿ:08-02-2000.
4. ಆಯುಕ್ತರು, ಹಿಂವಕಇ, ಬೆಂಗಳೂರು ಇವರ ಪತ್ರ ಸಂ/ಹಿಂವನಿ/ಮೊಶಾ-2/ಸಿಆರ್-16/2010-11, ದಿ:05-06-2010.

-****-

ಕರ್ನಾಟಕ ಸರ್ಕಾರವು ಉಲ್ಲೇಖ(1) ಸರ್ಕಾರಿ ಆದೇಶ/ ಅಧಿಸೂಚನೆಗಳ ರೀತ್ಯಾ ಶೈಕ್ಷಣಿಕ ಸೌಲಭ್ಯ ಪಡೆಯಲು ಹಿಂದುಳಿದ ವರ್ಗಗಳಿಗಾಗಿ ಶೇಕಡಾ 32ರಷ್ಟು ಮೀಸಲಾತಿ ಸೌಲಭ್ಯ ಕೆಳಕಂಡಂತೆ ಕಲ್ಪಿಸಿರುತ್ತದೆ.

| | | |
|---|---|---|
| 1. | ಪ್ರವರ್ಗ-1 | ಶೇ-4 |
| 2. | ಪ್ರವರ್ಗ-2ಎ | ಶೇ-15 |
| 3. | ಪ್ರವರ್ಗ-2ಬಿ | ಶೇ-4 |
| 4. | ಪ್ರವರ್ಗ-3ಎ | ಶೇ-4 |
| 5. | ಪ್ರವರ್ಗ-3ಬಿ | ಶೇ-5 |
| | ಒಟ್ಟು | ಶೇ.32 |

ಈ ಮೀಸಲಾತಿಯನ್ನು ಭಾರತ ಸಂವಿಧಾನದ ಅನುಚ್ಛೇದ 15(4)ರಡಿಯಲ್ಲಿ ಕಲ್ಪಿಸಿದೆ.

ಸರ್ಕಾರಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ವಿವಿಧ ಕೋರ್ಸ್‌ಗಳಿಗೆ ಪ್ರವೇಶ ನೀಡುವ ಸಂದರ್ಭದಲ್ಲಿ ಪ್ರವೇಶ ಪ್ರಾಧಿಕಾರಿಗಳು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಶೇಕಡಾ.32ರಷ್ಟು ಮೀಸಲಾತಿ ಕಾಯ್ದಿರಿಸಿ, ಪ್ರವೇಶ ಪ್ರಕ್ರಿಯೆ ನಡೆಸಬೇಕಾಗಿರುತ್ತದೆ.

ಆದರೆ, ಬಹಳಷ್ಟು ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪ್ರಕ್ರಿಯೆ ನಡೆಸುವ ಸಂದರ್ಭದಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮೀಸಲಿರಿಸಿರುವ ಶೇಕಡ 32ರಷ್ಟು ಮೀಸಲಾತಿಯನ್ನು ಕಾಯ್ದಿರಿಸದೇ ಪ್ರವೇಶಗಳನ್ನು ಮಾಡಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಸರ್ಕಾರವು ಒದಗಿಸಿರುವ ಸಂವಿಧಾನಾತ್ಮಕ ಮೀಸಲಾತಿಯನ್ನು ನೀಡದೇ ಇರುವುದು ಇಲಾಖಾ ಗಮನಕ್ಕೆ ಬಂದಿರುತ್ತದೆ.

ಸರ್ಕಾರವು ಕರ್ನಾಟಕ ಅನುಸೂಚಿತ ಬುಡಕಟ್ಟುಗಳು ಮತ್ತು ಇತರೇ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ಅಧಿನಿಯಮ 1990 ಹಾಗೂ ನಿಯಮ 1992ನ್ನು ರಚಿಸಿ ಆಗಿಂದಾಗ್ಗೆ ಅಗತ್ಯ ತಿದ್ದುಪಡಿಗಳನ್ನು ಹೊರಡಿಸಿರುತ್ತದೆ. ಇತ್ತೀಚಿಗೆ ದಿನಾಂಕ:08-02-2000ರಲ್ಲಿ ಅಧಿಸೂಚನೆಯನ್ನು ಹೊರಡಿಸಿ ನಿಯಮಗಳಿಗೆ ಸೂಕ್ತ ತಿದ್ದುಪಡಿಗಳನ್ನು ಹೊರಡಿಸಿರುತ್ತದೆ. (ಉಲ್ಲೇಖ(1)ರ ನಿಯಮ-3ಎ ರನ್ವಯ ಸಂಬಂಧಪಟ್ಟ ತಹಸೀಲ್ದಾರರಿಗೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ನೀಡಲು ಅರ್ಜಿ ಸಲ್ಲಿಸಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಪಡೆದುಕೊಳ್ಳಬೇಕು. ಸದರಿ ಪತ್ರವನ್ನು ಪ್ರವೇಶ ಪಡೆಯಲಿಚ್ಛಿಸುವ ಅರ್ಜಿಯೊಂದಿಗೆ ಲಗತ್ತಿಸಬೇಕು. ಈ ರೀತಿ ಲಗತ್ತಿಸಲಾದ ಜಾತಿ ಆದಾಯ ಪ್ರಮಾಣ ಪತ್ರಗಳನ್ನಾಧರಿಸಿ, ಗುಂಪುವಾರು (ಅಂದರೆ ಪ್ರವರ್ಗ-1, ಪ್ರವರ್ಗ2ಎ, ಪ್ರವರ್ಗ-2ಬಿ, ಪ್ರವರ್ಗ3ಎ, ಪ್ರವರ್ಗ3ಬಿ) ವಿಂಗಡಿಸಿಕೊಳ್ಳಬೇಕು. ತದನಂತರ ಕೋರ್ಸಿಗೆ ನಿಗದಿಪಡಿಸಿಕೊಂಡಿರುವ ಪ್ರವೇಶ ಅನುಪಾತಗಳನ್ವಯ ಪ್ರವರ್ಗವಾರು ಅರ್ಹತಾ ಪಟ್ಟಿಯನ್ನು ಸಿದ್ಧಪಡಿಸಿಕೊಂಡು ಅದರನ್ವಯ ಪಟ್ಟಿಯನ್ನು ಪ್ರಕಟಿಸಬೇಕು. ತರುವಾಯ ನಿಯಮ 16ರನ್ವಯ ನಮೂನೆ-3ರ ವಹಿಯಲ್ಲಿ ಮಾಹಿತಿಯನ್ನು ದಾಖಲಿಸಿ ಪ್ರವೇಶವನ್ನು ನೀಡಬೇಕು.

ಸರ್ಕಾರವು ಸಂವಿಧಾನತ್ಮಕವಾಗಿ ನಿಗದಿಪಡಿಸಿರುವ ಮೀಸಲಾತಿಯನ್ನು ಪಾಲಿಸಲಾಗಿದೆಯೇ ಅಥವಾ ಉಲ್ಲಂಘಿಸಲಾಗಿದೆಯೇ ಎಂಬ ಬಗ್ಗೆ ಪರಿಶೀಲನೆ ನಡೆಸಲು ಹಾಗೂ ಉಲ್ಲಂಘಿಸಿದಲ್ಲಿ ನಿಯಮ 10 ( 1 ರಿಂದ4)ರಲ್ಲಿ ಅಧಿಕಾರಿಗಳನ್ನು ನೇಮಿಸಿ, ಅಧಿಕಾರ ನೀಡಿ ಸಂಬಂಧಪಟ್ಟ ಉಲ್ಲಂಘನೆ ಮಾಡಿದ ಅಧಿಕಾರಿಗಳನ್ನು ಶಿಕ್ಷೆಗೆ ಗುರಿಪಡಿಸಲು ಅವಕಾಶವಿರುತ್ತದೆ.

ಪುನಃ ನಿಯಮ 13ರನ್ವಯ ಎಲ್ಲಾ ಪ್ರವೇಶ ಪ್ರಾಧಿಕಾರಿಗಳು ನಮೂನೆ-7ರಲ್ಲಿ ಪ್ರತಿವರ್ಷ ಮೀಸಲಾತಿ ನಿಯಮಗಳನುಸಾರ ಪ್ರವೇಶ ನೀಡಿದ ಬಗ್ಗೆ ವಾರ್ಷಿಕ ವರದಿಯನ್ನು 04 ಪ್ರತಿಗಳಲ್ಲಿ ಜಿಲ್ಲಾ ಬಿಸಿಎಂ ಕಛೇರಿಗೆ ಸಲ್ಲಿಸಬೇಕು. ಈ ರೀತಿ ಸ್ವೀಕೃತಗೊಂಡ ವಾರ್ಷಿಕ ವರದಿಗಳನ್ನು ಪರಿಶೀಲಿಸಿ, ಅಧಿನಿಯಮ ಸೆಕ್ಷನ್-8ರನ್ವಯ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿ, ಆ ಸಮಿತಿಯ ಅನುಮೋದನೆ ನಂತರ ವಿಧಾನ ಸಭೆಯ ಉಭಯ ಸದನಗಳ ಮುಂದೆ ಮಂಡಿಸಬೇಕಾಗಿರುತ್ತದೆ.

ಈ ಎಲ್ಲಾ ಪ್ರಮುಖ ಸಂವಿಧಾನಾತ್ಮಕ ಅಂಶಗಳನ್ನು ತಿಳಿಯಪಡಿಸುತ್ತಾ ಪ್ರಸಕ್ತ ಸಾಲಿಗೆ ಪ್ರವೇಶ ಪ್ರಕ್ರಿಯೆಯಲ್ಲಿ ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ನಡೆಸಲು ಹಾಗೂ ಮುಂದೆಯೂ ಸಹಾ ಸರ್ಕಾರವು ಆಗಿಂದಾಗ್ಗೆ ಹೊರಡಿಸುವ ಆದೇಶ, ಅಧಿಸೂಚನೆ, ಸುತ್ತೋಲೆಗಳನ್ವಯ ಪ್ರವೇಶ ಪ್ರಕ್ರಿಯೆ ನಡೆಸಲು ಹಾಗೂ ತಪ್ಪದೇ ವಾರ್ಷಿಕ ವರದಿಗಳನ್ನು ಸಲ್ಲಿಸಲು ಮತ್ತು ಸರ್ಕಾರವು ನಿಗದಿಪಡಿಸಿರುವ ಪ್ರಾಸಿಕ್ಯೂಷನ್ ನಿಯಮಕ್ಕೆ ಗುರಿಯಾಗದಿರಲು ಕಟ್ಟೆಚ್ಚರಿಕೆ ವಹಿಸಲು/ಹಾಸನ ಜಿಲ್ಲಾ ವ್ಯಾಪ್ತಿಯ ಸಂಬಂಧಪಟ್ಟ ಎಲ್ಲಾ ಪ್ರವೇಶ ಪ್ರಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಸಹಿ/-
ಜಿಲ್ಲಾ ಅಧಿಕಾರಿ
ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ
ಇಲಾಖೆ, ಹಾಸನ.

ಪ್ರತಿಯನ್ನು:-

1. ಉಪನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಹಾಸನ. ಇವರಿಗೆ ಮಾಹಿತಿಗಾಗಿ ಹಾಗೂ ತಮ್ಮ ವ್ಯಾಪ್ತಿಯ ಎಲ್ಲಾ ಶಿಕ್ಷಣ ಸಂಸ್ಥೆಗಳಿಗೆ ಸೂಕ್ತ ಸೂಚನೆಗಳನ್ನು ನೀಡಿ ಮಾಹಿತಿಯನ್ನು ಸಲ್ಲಿಸುವಂತೆ ತಿಳಿಸಲು ಕೋರಿದೆ.
2. ಜಿಲ್ಲೆಯ ಎಲ್ಲಾ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
3. ಜಿಲ್ಲೆಯ ಎಲ್ಲಾ ಪದವಿಪೂರ್ವ/ಪದವಿ/ಶಿಕ್ಷಣ ಸಂಸ್ಥೆಗಳ ಪ್ರಾಂಶುಪಾಲರುಗಳಿಗೆ ಕಳುಹಿಸುತ್ತಾ, ಸುತ್ತೋಲೆಯಲ್ಲಿ ತಿಳಿಸಿರುವ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ಲಗತ್ತಿಸಿರುವ ನಮೂನೆ-7ರ ಮಾಹಿತಿಯ 04 ಪ್ರತಿಗಳನ್ನು ತಮ್ಮ ತಾಲ್ಲೂಕಿನ ತಾಲ್ಲೂಕು ಪಂಚಾಯತ್‌ಗಳಲ್ಲಿರುವ ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳಿಗೆ ಸಲ್ಲಿಸಬೇಕಾಗಿ ಕೋರಿದೆ.
4. ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯಿತಿ ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
5. ಕಛೇರಿ ಪ್ರತಿ.

No 2274
01/6-11

ಜಿಲ್ಲಾ ಅಧಿಕಾರಿ
ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ
ಇಲಾಖೆ, ಹಾಸನ.

"Attested"
Principal
A.V. Kanthamma College for Women
Hassan

D:\MY DOCUMENTS\WNL\FORM NO.7 2010-11 CR-18 08-09.doc

